


## ಎಡದಿಂದ ಬಲಕ್ಕೆ

1. ಕವಿ ಸ್ವಭಾವ ಹೀಗಿರುವುದು ನೈಸರ್ಗಿಕವೇ ಬಿಡಿ (4)
3. ವಾಮನನ್ನು ಕಂಡದ್ದು ಪಕ್ಷದ ಒಂಬತ್ತನೇ ದಿನ (3)
4. ಖರ್ಜೂರದ ಗಿಡದ ಮೇಲೊಬ್ಬ ಮಡಿವಾಳ ನೋಡಿ (3)
6. ಮರೆಯಲ್ಲಿ ತೋಡುವ ಕೆಲಸವನ್ನು ಶೀಘ್ರಗೊಳಿಸು (4)
7. ಹೆಗಲನ್ನು ಒತ್ತದೆ ಹಿಂದೆ ಕೈ ಸೇರಿಸಿದರೆ ಸೌತೆ ಜಾತಿಯ ಹಣ್ಣು (4)
9. ಅಜ್ಜನಿಗೂ ಅಜ್ಜಿಗೂ ಅಂತರ 'ಇಲಿ–ಆನೆ' ಇದ್ದಂತೆ (4)
11. ಉಪಾಯ ಅದೇ– ಪಾತಾಳದಿಂದಲೇ ಬುನಾದಿ (4)
13. 'ನೂರು ಲಕ್ಷ ಬಿಲ್ಲು'ಗಳ ಕಡಲಂಚಿನ ಪುಣ್ಯಕ್ಷೇತ್ರ (4)
15. ಕಾರು ಕದ್ದವನನ್ನು ಕಂಡುಹಿಡಿದವ ಗುಮಾಸ್ತ (4)
17. ಯಾತನೆಯನ್ನು ನಿವಾರಿಸುವ ಪ್ರಯತ್ನ ಹೇಗೆ? (3)
18. ಹರಕು ತೊಟ್ಟವ ನುಗ್ಗಿದ ಗುಹೆಯೇ ಹಿಂದೆ ಮುಂದೆ (3)
19. ನೂರಾರು ಪ್ರಪಂಚಗಳು ಇದ್ದರೂ ಮನುಷ್ಯನ ನೆಲೆ ಭೂಮಿಯೇ (4)

## ಮೇಲಿನಿಂದ ಕೆಳಕ್ಕೆ

1. ಸಮಾನ ಹಿತ ಕಾಪಾಡಿದ್ದು ಆತನ ಒಡೆತನ (3)
2. ಕಂಡವರಿಗೆಲ್ಲ ಗೊತ್ತು ಅದು ಕಚ್ಚಾ ಪ್ರತಿ (3)
3. ಅಂಥವರ ಸಭೆಯನ್ನು ವೀಕ್ಷಿಸಲು ಅದೃಷ್ಟ ಬೇಕು (3)
5. ಕಣ್ಣುಜ್ಜಿ ನೋವಲ್ಲೇ ಕುಟುಕಿತು ಆ ಕೀಟ (3)
7. ಋಷಿ ತರಲು ಸಾಧ್ಯವಿಲ್ಲ, ಅದು ಕಳಂಕಭರಿತ (4)
8. ಶೈಲಜಳ ಊರಲ್ಲಿ ಎಂಥ ಜಲ ಸಂಗ್ರಹಾಗಾರ !(4)
9. ಅವನು ಬಂದದ್ದರಿಂದ ಈ ಸುಭದ್ರ ಸ್ನೇಹ (4)
10. ಜಟೆಯನ್ನೇ ಎಳೆದೆಳೆದು ಪಟಪಟ ಹೊಡೆದಾಟ (4)
12. ಅಪಾಯವನ್ನು ತಂದೀತು ಹಾಗೆ ಸೇವಿಸುವ ದ್ರವ (3)
14. ಕರಕಲನ್ನೆಲ್ಲ ಅಲ್ಲೇ ಪುಡಿ ಮಾಡು (3)
15. ಕನಕಗಿರಿಯನ್ನು ಹತ್ತಿ ನೋಡಿದರೆ ಬರೀ ಅರಣ್ಯ (3)
16. ನಕ್ಷತ್ರಿಕರ ಕಾಟದಲ್ಲಿ ಕ್ರೂರ ಶಿಕ್ಷಾ ತಾಣ (3)

### 17-7-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸದಾಕಾಲ; 3. ಆರಾಮ; 4. ವಣಿಕ; 6. ನವನೀತ; 7. ಶವಾಸನ; 9. ಸುಲಭಿಸು; 12. ಹಣಾಹಣಿ; 14. ಗಹನ; 15. ಮಾರುತ; 16. ಸಹಕಾರಿ.

ಮೇಲಿಂದ ಕೆಳಕ್ಕೆ:

1. ಸಮರ್ಪಿತ; 2. ಲವಲೇಶ; 3. ಆಸವ; 5. ಕಲಸ (=ಕಲಶ); 6. ನಮೂದಿಸು; 8. ನಜರಾಣಿ; 10. ಲವಂಗ; 11. ಸುಮನಸ; 12. ಹಟಮಾರಿ; 13. ಹರಿತ.

## ಪ್ರಶ್ನಾಂಕಣ

# ಈಸ್ಟರ್ ದ್ವೀಪ ಏಕೆ ಪ್ರಸಿದ್ಧ?

ಈಸ್ಟರ್ ದ್ವೀಪ– ಅದು ಶಾಂತ ಸಾಗರದಲ್ಲಿನ ಒಂದು ಪುಟ್ಟ ದ್ವೀಪ. ಶಾಂತ ಸಾಗರದ ಮಹಾನ್ ವೈಶಾಲ್ಯದಲ್ಲಿ 'ಕಳೆದು ಹೋಗಿರುವಂತೆ' ನಿಂತಿರುವ ಅಂಗೈ ಅಗಲದ ಈ ದ್ವೀಪ (ಅದರ ವಿಸ್ತೀರ್ಣ ಸುಮಾರು ಒಂದು ನೂರು ಚದರ ಕಿಮೀ ಅಷ್ಟೇ) ದಕ್ಷಿಣ ಅಮೆರಿಕದ ಚಿಲಿ ದೇಶಕ್ಕೆ ಸೇರಿದೆ. ಆದರೂ ಅಲ್ಲಿಂದ ಕನಿಷ್ಠ 3700 ಕಿ.ಮೀ. ದೂರದಲ್ಲಿದೆ. ಅಷ್ಟೇ ಅಲ್ಲ, ಕಡಲ ಮೇಲಿನ ಯಾವುದೇ ನೌಕಾ ಮಾರ್ಗವೂ ಈ ದ್ವೀಪದ ಸನಿಹವೂ ಸಾಗಿಲ್ಲ. ಹಾಗೆ ಅತ್ಯಂತ ಏಕಾಂಗಿಯಾಗಿರುವ ಈ ದ್ವೀಪದ ಶಾಶ್ವತ ನೆಲಸಿಗರ ಜನಸಂಖ್ಯೆ ಐದು ಸಾವಿರ ಮೀರಿಲ್ಲ. ಹಾಗೆಲ್ಲ ಇದ್ದೂ ಈ ದ್ವೀಪದ ಪ್ರಸಿದ್ಧಿ ಮಾತ್ರ ವಿಪರೀತ.

ಅದಕ್ಕೆ ಕಾರಣವೂ ಅಷ್ಟೇ ಅದ್ಭುತ; ಕುತೂಹಲಭರಿತ ಕೂಡ.

ಅದೇನೆಂದರೆ ಜಗತ್ತಿನಿಂದಲೇ ದೂರ ಸರಿದಂತೆ ನಿಂತಿರುವ ಈ ಪುಟ್ಟ ದ್ವೀಪದಲ್ಲಿ ಹಲವಾರು ನೂರು ಸಂಖ್ಯೆಯ 'ಶಿಲಾ ಮಾನವರು' ನೆಲೆ ಹಿಡಿದಿದ್ದಾರೆ. ನಾಲ್ಕರಿಂದ ಮೂವತ್ತೂರು ಅಡಿ ಎತ್ತರದ, ಗರಿಷ್ಠ ಎಂಬತ್ತು ಟನ್ ತೂಕದ ಈ ಮಾನವ ರೂಪಿ ಏಕಶಿಲಾ ಶಿಲ್ಪಗಳದ್ದು ಉದ್ದುದ್ದನೆಯ ಮುಖ ಲಕ್ಷಣ, ಕ್ರೂರವೆನಿಸುವ ಬಾಯಿ, ನೆಲ ಹಿಡಿದು ಕುಳಿತ ಭಂಗಿ ( ಚಿತ್ರ 1, 2 ನೋಡಿ)

ಪುರಾತತ್ವ ವಿಜ್ಞಾನಿಗಳ ಪ್ರಕಾರ ಈ ಎಲ್ಲ ಏಕಶಿಲಾ ದೈತ್ಯ ಶಿಲ್ಪಗಳನ್ನೂ ಕಡೆದು ರೂಪಿಸಿದ ಕಾಲ ಈಗ್ಗೆ ಸುಮಾರು ಮೂರೂವರೆ ಸಾವಿರ ವರ್ಷ ಹಿಂದೆ (ಕ್ರಿಸ್ತಪೂರ್ವ 1470) ಈಸ್ಟರ್ ದ್ವೀಪದ್ದೇ ಬೃಹತ್ ಬೆಟ್ಟವೊಂದರ ಬಂಡೆ ಮುಖದಲ್ಲೇ ಕೆತ್ತಿ ತೆಗೆದು ಹದಿನೆಂಟು–ಇಪ್ಪತ್ತು ಕಿಮೀ ದೂರ ಸಾಗಿಸಿ ತಂದು ಈ ಬಂಡೆ ಮಾನವರನ್ನು ವಿಶಾಲ ವೇದಿಕೆಗಳ ಮೇಲೆ ಸಾಲು ಸಾಲಾಗಿ ಹಲವಾರು ನೆಲೆಗಳಲ್ಲಿ ನಿಲ್ಲಿಸಲಾಗಿದೆ.




ವಿಸ್ಮಯ ಏನೆಂದರೆ ಈಸ್ಟರ್ ದ್ವೀಪದ ಈ ಶಿಲಾಶಿಲ್ಪಗಳನ್ನು ನಿರ್ಮಿಸಿದ ಜನ ಯಾರೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಅಷ್ಟೊಂದು ಪೂರ್ವ ಕಾಲದಲ್ಲಿ ಇಂಥ ಆಕೃತಿಗಳನ್ನು ಅಷ್ಟೊಂದು ಸಂಖ್ಯೆಯಲ್ಲಿ ಕಡೆದು ಸ್ಥಾಪಿಸಿದ್ದರ ಉದ್ದೇಶವಂತೂ ಕಿಂಚಿತ್ತೂ ತಿಳಿದಿಲ್ಲ. ಕೆತ್ತನೆಯ ಲೋಹ ಸಾಧನಗಳು ಇಲ್ಲದಿದ್ದ, ಚಕ್ರಗಳ ಬಳಕೆ ತಿಳಿಯದಿದ್ದ, ಭಾರ ಎಳೆಯಬಲ್ಲ ಸಾಕು ಪ್ರಾಣಿಗಳೂ ಲಭ್ಯವಿಲ್ಲದಿದ್ದ ಆ ಕಾಲದಲ್ಲಿ ಇದೆಲ್ಲ ಸಾಧ್ಯವಾದದ್ದು ಹೇಗೆ ಎಂಬುದಂತೂ ಲವಲೇಶವೂ ಅರ್ಥವಾಗಿಲ್ಲ. ಇವೆಲ್ಲದರ ಬಗೆಗೂ ಕೇವಲ ಕಾಲ್ಪನಿಕ, ತಾರ್ಕಿಕ ಸಿದ್ಧಾಂತಗಳು ರೂಪುಗೊಂಡಿವೆ ಅಷ್ಟೆ.!

ಈ ಸೋಜಿಗಮಯ, ನಿಗೂಢ, ಪುರಾತನ ಬಂಡೆ ಶಿಲ್ಪಗಳಿಂದಾಗಿ ಈಸ್ಟರ್ ದ್ವೀಪ ಜಗತ್ಪ್ರಸಿದ್ಧ.

■ ಎನ್. ವಾಸುದೇವ್